**EXAMINATION CODE : 4**

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | |
|---|---|---|---|---|---|---|---|
| | | | | | | | |

| ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ |
|---|
| 389737 |

2007

# ಪ್ರಶ್ನೆ ಪತ್ರಿಕೆ ಪುಸ್ತಿಕೆ - ಪ್ರಥಮ ಪತ್ರಿಕೆ

**(ಪ್ರಶ್ನೆ ಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ದಯವಿಟ್ಟು ಓದಿ)**

**ವಿಷಯಗಳು : ಸಾಮಾನ್ಯ ಜ್ಞಾನ, ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನಸಿಕ ಸಾಮರ್ಥ್ಯ**

**ಗರಿಷ್ಠ ಅಂಕಗಳು : 100** (10.30 a.m. to 12.30 p.m.) **ಗರಿಷ್ಠ ಅವಧಿ : 2 ಗಂಟೆಗಳು**

**(ಓ.ಎಂ.ಆರ್. ಉತ್ತರ ಪತ್ರಿಕೆ ಮುಖಪುಟದಲ್ಲಿ ಕೇಳಿರುವ ವಿವರಗಳನ್ನು ಭರ್ತಿ ಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ.)**

## ಅಭ್ಯರ್ಥಿಗಳಿಗೆ ಸೂಚನೆಗಳು

1. 100 ಪ್ರಶ್ನೆಗಳಿರುವ ವೊಹರಾಗಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಪಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯು ಅಡಕಗೊಂಡಿದೆ ಇದನ್ನು ನಿಮಗೆ ನೀಡಲಾಗಿದೆ.
2. ಪ್ರಶ್ನೆ ಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಪಿಡಿ ಉತ್ತರ ಪತ್ರಿಕೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೇಳಿರುವ ಮಾಹಿತಿಯನ್ನು ಅತೀ ಜಾಗರೂಕತೆಯಿಂದ ಕ್ರಮಸಂಖ್ಯೆ 1 ರಿಂದ 7 ರವರೆಗೂ ಭರ್ತಿ ಮಾಡಿ. ತಪ್ಪಿದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರು.
3. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕ್ರಮಸಂಖ್ಯೆಯನ್ನು ನಿಮಗೆ ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿನ ಕ್ರಮಸಂಖ್ಯೆ 6 ರಲ್ಲಿ ಹಾಗೂ ಓ.ಎಂ.ಆರ್. ಉತ್ತರಪತ್ರಿಕೆಯ ಕ್ರಮಸಂಖ್ಯೆಯನ್ನು ಕ್ರಮಸಂಖ್ಯೆ 7 ರಲ್ಲಿ ಭರ್ತಿ ಮಾಡಬೇಕು.
4. ಪರೀಕ್ಷಾ ಅವಧಿಯಲ್ಲಿ :-
   (ಅ) ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ.
   (ಆ) ಪ್ರತಿ ಪ್ರಶ್ನೆಗೆ ನೀಡಲಾಗಿರುವ ನಾಲ್ಕು ಉತ್ತರಗಳ ಪೈಕಿ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ.
   (ಇ) ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಉದಾಹರಣೆಗೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿನ 20ನೇ ಪ್ರಶ್ನೆಯ ಸರಿ ಉತ್ತರವು ಕ್ರಮಸಂಖ್ಯೆ (3) ಆಗಿದ್ದಲ್ಲಿ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕ್ರಮಸಂಖ್ಯೆ 20 ರ ಮುಂದೆ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ನೀಲಿ ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು.

   **20.** ① ② ● ④ (ಇದು ಉದಾಹರಣೆ ಮಾತ್ರ)
5. ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಪುಟಗಳಲ್ಲಿ ಖಾಲಿ ಜಾಗ ಬಿಟ್ಟಿರುವಲ್ಲಿ ಮಾತ್ರ ಉತ್ತರವನ್ನು ಕಂಡು ಹಿಡಿಯುವ ಕಚ್ಚಾ ಕಾರ್ಯವನ್ನು (ರಫ್ ವರ್ಕ್) ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮಾಡತಕ್ಕದ್ದಲ್ಲ.
6. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಿದಲ್ಲಿ ಅಂತಹ ಉತ್ತರಗಳಿಗೆ ಅಂಕಗಳನ್ನು ನೀಡಲು ಬರುವುದಿಲ್ಲ. ಇದರ ಉದಾಹರಣೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ನೋಡಿ.
7. ಓ.ಎಂ.ಆರ್. ಉತ್ತರ ಪತ್ರಿಕೆಯ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೆ ಸಹಿ ಮಾಡಬೇಕು. ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು.
8. ನಿಮಗೆ ಉತ್ತರಿಸಲು ಓ.ಎಂ.ಆರ್. ಉತ್ತರ ಪತ್ರಿಕೆಯು ಕಾರ್ಬನ್ ರಹಿತ ಪ್ರತಿಯೊಂದಿಗೆ ಇದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ. ಎಂ. ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
9. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕ್ಯುಲೇಟರ್, ಪೇಜರ್ ಮತ್ತು ಮೊಬೈಲ್ ದೂರವಾಣಿಯನ್ನು ತರುವುದನ್ನು ನಿಷೇಧಿಸಿದೆ.
10. ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಅನರ್ಹರಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

### ಓ. ಎಂ. ಆರ್. ಉತ್ತರಪತ್ರಿಕೆ ಭರ್ತಿ ಮಾಡಲು ಸೂಚನೆಗಳು

**(1) ಪ್ರತಿಯೊಂದು ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ. (2) ವೃತ್ತಗಳನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಉತ್ತರವನ್ನು ತುಂಬಿದ ಮೇಲೆ ಬದಲಿಸಲು ಪ್ರಯತ್ನಿಸಬೇಡಿ. (3) ವೃತ್ತಗಳಲ್ಲಿರುವ ಸಂಖ್ಯೆಗಳು ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬಬೇಕು (4) ಉತ್ತರ ಪತ್ರಿಕೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು ಅಥವಾ ಚುಕ್ಕೆಯಾಗಲೀ ಮಾಡಬಾರದು. (5) ಇದು ಕಾರ್ಬನ್ ರಹಿತ ಉತ್ತರ ಪತ್ರಿಕೆ. ಉತ್ತರ ಪತ್ರಿಕೆಯ ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ತುಂಬುವ ಅಗತ್ಯ ಇಲ್ಲ.**

SEAL



**www.inyatrust.com**

# KANNADA VERSION

1. ಶಿಕ್ಷಣವು ಮಗುವಿನ ಸಮತೋಲನ ಬೆಳವಣಿಗೆಗೆ ಪೂರಕವಾಗಿರಬೇಕೆಂದು ಪ್ರತಿಪಾದಿಸಿದವರು

   (1) ಜಾನ್ ಡ್ಯೂಯಿ (2) ಜೆ. ಜೆ. ರೂಸೊ

   (3) ಜೆ. ಎಚ್. ಪೆಸ್ಟಾಲೂಜಿ (4) ಮರಿಯ ಮಾಂಟೆಸೋರಿ

2. ಥಾಯ್‌ಲ್ಯಾಂಡ್‌ನ ಜೊಮೆಟೀನನಲ್ಲಿ ನಡೆದ 'ಸರ್ವರಿಗೂ ಶಿಕ್ಷಣ' ವಿಶ್ವ ಸಮ್ಮೇಳನದ ಇಸವಿ

   (1) 1990 (2) 1987

   (3) 1991 (4) 1995

3. ಮೊಟ್ಟ ಮೊದಲ ಬಾರಿಗೆ ಕಾಗದವನ್ನು ಕಂಡು ಹಿಡಿದ ದೇಶ

   (1) ಈಜಿಪ್ಟ್ (2) ನಾರ್ವೆ

   (3) ಚೀನಾ (4) ಗ್ರೀಸ್

4. ಅಲೆಗ್ಸಾಂಡರ್ ಗ್ರೆಹಾಂ ಬೆಲ್ ಕಂಡು ಹಿಡಿದ ವಸ್ತು

   (1) ಟೆಲಿವಿಷನ್ (2) ಟೆಲಿಫೋನ್

   (3) ವಿದ್ಯುಚ್ಛಕ್ತಿ (4) ಹಬೆ ಯಂತ್ರ

5. ವಿದ್ಯುತ್ ಒಲೆಯ ತಂತಿ ಸುರುಳಿಯಲ್ಲಿ ಉಪಯೋಗಿಸುವ ಮೂಲಧಾತು

   (1) ಹಿತ್ತಾಳೆ (2) ತಾಮ್ರ

   (3) ಕಬ್ಬಿಣ (4) ನೈಕ್ರೋಮ್

6. ಹೂವಿನ ಒಂದು ಕಾರ್ಯ ಈ ಕೆಳಗಿನದಾಗಿರುತ್ತದೆ

   (1) ಆಹಾರವನ್ನು ಇತರ ಭಾಗಗಳಿಗೆ ಸಾಗಿಸುವುದು

   (2) ಪರಾಗದಾನ ಮಾಡುವುದು

   (3) ಆಹಾರವನ್ನು ಹೀರುವುದು

   (4) ನೀರನ್ನು ಹೊರದೂಡುವುದು

7. ನೀರಿನ ಶುದ್ಧ ಸ್ವರೂಪ

   (1) ಬಾಹ್ಯ ನೀರು (2) ಮಳೆ ನೀರು

   (3) ಭಾವಿ ನೀರು (4) ಖನಿಜ ನೀರು

8. ಥೈರಾಡ್ ಗ್ರಂಥಿಯು ಮಾನವ ದೇಹದ ಈ ಭಾಗದಲ್ಲಿದೆ

   (1) ಪ್ಲೀಹ (2) ಕುತ್ತಿಗೆ

   (3) ಕಂಕುಳ (4) ಉದರ



www.inyatrust.com

9. ಏಸುಕ್ರಿಸ್ತ ಜನಿಸಿದ ಇಸವಿ

(1) ಕ್ರಿ. ಶ. 1 (2) ಕ್ರಿ. ಪೂ. 1

(3) ಕ್ರಿ. ಪೂ.4 (4) ಕ್ರಿ. ಶ. 4

10. ಈ ಸಂತತಿಯ ರಾಜರು ದಕ್ಷಿಣಭಾರತದಲ್ಲಿ ಅತಿದೊಡ್ಡ ಸಾಮ್ರಾಜ್ಯ ಹೊಂದಿದ್ದರು

(1) ಪಲ್ಲವರು (2) ಚಾಲುಕ್ಯರು

(3) ಚೋಳರು (4) ಕುಶಾನರು

11. ಸ್ವತಂತ್ರ ಭಾರತದಲ್ಲಿ ಮೊದಲನೆ ಸಾರ್ವತ್ರಿಕ ಚುನಾವಣೆ ನಡೆದ ಇಸವಿ

(1) 1950 (2) 1951

(3) 1952 (4) 1953

12. ಕಂಚು ಮಿಶ್ರಲೋಹ ಈ ಕೆಳಗಿನ ಲೋಹಗಳನ್ನು ಒಳಗೊಂಡಿದೆ

(1) ತಾಮ್ರ ಮತ್ತು ತವರ (2) ಅಲ್ಯುಮಿನಿಯಂ ಮತ್ತು ತವರ

(3) ಸತುವು ಮತ್ತು ತಾಮ್ರ (4) ಕಬ್ಬಿಣ ಮತ್ತು ತಾಮ್ರ

13. ಓಮನ್ ಕೊಲ್ಲಿ ಮತ್ತು ಪರ್ಶಿಯನ್ ಕೊಲ್ಲಿಯನ್ನು ಸೇರಿಸಿರುವ ಜಲಸಂಧಿ

(1) ಪಾಕ್ ಜಲಸಂಧಿ (2) ಬಾಬ್-ಎಲ್-ಮನ್‌ದೇಬ್ ಜಲಸಂಧಿ

(3) ಹೊರಮಸ್ ಜಲಸಂಧಿ (4) ಮೆಸ್ಸಿನ ಜಲಸಂಧಿ

14. ಗ್ರಹಗಳಲ್ಲಿ ಅತಿ ಪ್ರಕಾಶಮಾನವಾಗಿ ಕಾಣುವ ಗ್ರಹ

(1) ಶನಿ (2) ಶುಕ್ರ

(3) ಯುರೇನಸ್ (4) ನೆಪ್ಚೂನ್

15. ಈ ಕೆಳಗಿನ ದೇಶ ಪೂರ್ವಏಷ್ಯಾ ಪ್ರದೇಶದಲ್ಲಿದೆ

(1) ಭಾರತ (2) ಪಾಕಿಸ್ತಾನ

(3) ಸಿಂಹಳ (ಶ್ರೀಲಂಕಾ) (4) ಟೈವಾನ್

16. 'ಬೇಸ್ ಬಾಲ್' ಈ ಕೆಳಗಿನ ದೇಶದ ಜನಪ್ರಿಯ ಆಟ

(1) ಜಪಾನ್ (2) ಚೀನಾ

(3) ಯು.ಎಸ್.ಎ. (4) ಸ್ಪೇಯಿನ್



www.inyatrust.com

17. ಭಾರತ ಸರ್ಕಾರವು ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿಯನ್ನು ನೀಡಲು ಪ್ರಾರಂಭಿಸಿದ ವರ್ಷ

(1) 1960 (2) 1961
(3) 1962 (4) 1963

18. ಹಸಿರುಕ್ರಾಂತಿಯ ಮೂಲಕ ಭಾರತದ 'ಬ್ರೆಡ್ ಬ್ಯಾಸ್ಕೆಟ್' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ರಾಜ್ಯ

(1) ತಮಿಳು ನಾಡು (2) ಪಶ್ಚಿಮ ಬಂಗಾಲ
(3) ಪಂಜಾಬ್ (4) ಗುಜರಾತ್

19. ಲಿಬಿಯ ದೇಶದ ರಾಜಧಾನಿ

(1) ಬೆಲ್‌ಗ್ರೇಡ್ (2) ಕಂಪಾಲ
(3) ಹವಾನ (4) ಟ್ರಿಪೋಲಿ

20. 'ಸ್ಮಾಲ್ ಇಸ್ ಬ್ಯೂಟಿಫುಲ್' ಪುಸ್ತಕವನ್ನು ಬರೆದವರು

(1) ವಿಲ್ ಡ್ಯುರಾಂಟ್ (2) ಮ್ಯಾಥ್ಯೂ ಆರ್ನಾಲ್ಡ್
(3) ಇ. ಎಫ್. ಶುಮೇಕರ್ (4) ಜೆ. ಕೆ. ಗಾಲ್‌ಬ್ರೇತ್

21. ಡೇನಿಯಲ್ ಡೆಫೊ ಬರೆದಂತಹ ಪುಸ್ತಕ

(1) ಪ್ಯಾರಡೈಸ್ ಲಾಸ್ಟ್ (2) ಒನ್ ವರ್ಲ್ಡ್ ಟು ಶೇರ್
(3) ರಾಬಿನ್‌ಸನ್ ಕ್ರೂಸೊ (4) ಸ್ಟೋರಿ ಆಫ್ ಸಿವಿಲಿಸೇಷನ್

22. ಒರಿಸ್ಸಾ ರಾಜ್ಯವನ್ನು ಮೊದಲು ಈ ಹೆಸರಿನಿಂದ ಕರೆಯುತ್ತಿದ್ದರು

(1) ಕಲಿಂಗ (2) ಪಾಟಲೀಪುತ್ರ
(3) ಲಕ್ಷ್ಮಣ್‌ಪುರ (4) ವಲ್ಲಭಿ

23. 'ಕ್ರೋನ' ಈ ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯ

(1) ಸ್ವಿಟ್ಜರ್‌ಲ್ಯಾಂಡ್ ಫ್ರಾಂಕ್ (2) ನಾರ್ವೆ
(3) ಸ್ವೀಡನ್ (4) ಸೂಡಾನ್

24. ವಿಶ್ವಸಂಸ್ಥೆಯ ಮೊದಲ ಪ್ರಧಾನಕಾರ್ಯದರ್ಶಿ ಈ ದೇಶಕ್ಕೆ ಸೇರಿದವರು

(1) ನಾರ್ವೆ (2) ಬರ್ಮಾ (ಮ್ಯೆನಮಾರ್)
(3) ಆಸ್ಟ್ರಿಯ (4) ಯು.ಎಸ್.ಎ.

25. 'ವಿಶ್ವಸಂಸ್ಥೆ ದಿನ' ವನ್ನು ಈ ದಿನದಂದು ಆಚರಿಸುತ್ತಾರೆ

(1) ಅಕ್ಟೋಬರ್ 4 (2) ಎಪ್ರಿಲ್ 8
(3) ಅಕ್ಟೋಬರ್ 24 (4) ಮೇ 10



www.inyatrust.com

**26.** 'ಡೈಟ್' (DIET) ಈ ದೇಶದ ಪಾರ್ಲಿಮೆಂಟನ ಹೆಸರು

(1) ಇಸ್ರೇಲ್ (2) ಕೆನಡ

(3) ಚೀನಾ (4) ಜಪಾನ್

**27.** ಭಾರತದಲ್ಲಿ ಕೇಂದ್ರ ರಕ್ಷಣಾ ಖಾತೆಯನ್ನು ಹೊಂದಿರುವ ಸಚಿವರು

(1) ಪ್ರಣಾಬ್ ಮುಖರ್ಜಿ (2) ಮನ್‌ಮೋಹನ್ ಸಿಂಗ್

(3) ಎ. ಕೆ. ಆಂಟೊನಿ (4) ಶರದ್ ಪವಾರ್

**28.** ಶ್ರೀ ರಾಮೇಶ್ವರ್ ಠಾಕೂರ್ ಈ ರಾಜ್ಯದ ಪ್ರಸ್ತುತ ರಾಜ್ಯಪಾಲರು

(1) ಉತ್ತರ ಪ್ರದೇಶ (2) ಬಿಹಾರ್

(3) ಮಹಾರಾಷ್ಟ್ರ (4) ಕರ್ನಾಟಕ

**29.** ಭಾರತದ ಈ ಕೆಳಗಿನ ಸಂವಿಧಾನ ತಿದ್ದುಪಡಿಯಿಂದ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸಲಾಯಿತು

(1) 82 ನೇ ತಿದ್ದುಪಡಿ (2) 86 ನೇ ತಿದ್ದುಪಡಿ

(3) 84 ನೇ ತಿದ್ದುಪಡಿ (4) 83 ನೇ ತಿದ್ದುಪಡಿ

**30.** ಭೂಮಿಯ ಕಕ್ಷೆಯನ್ನು ಮೊಟ್ಟಮೊದಲ ಬಾರಿಗೆ ಸುತ್ತಿದ ಮಹಿಳಾ ಗಗನಯಾತ್ರಿ

(1) ವೆಲೆಂಟಿನಾ ಟೆರೆಶ್ಕೋವ (2) ಸುನಿತಾ ವಿಲಿಯಂಸ್

(3) ಕಲ್ಪನಾ ಚಾವ್ಲ (4) ಸ್ಯಾಲಿ ರೈಡ್

**31.** ಪಾಕಿಸ್ತಾನದ ಮೊದಲ ಗವರ್ನರ್ ಜನರಲ್

(1) ಲಿಯಾಖತ್ ಅಲಿ ಖಾನ್ (2) ಮೊಹಮದ್ ಅಲಿ ಜಿನ್ನ

(3) ಅಯೂಬ್ ಖಾನ್ (4) ಯಾಹ್ಯಾ ಖಾನ್

**32.** 'ಮೇಪಲ್ ಎಲೆಯ ದೇಶ' ಎಂದೇ ಹೆಸರಾಗಿರುವ ದೇಶ

(1) ಥಾಯ್‌ಲ್ಯಾಂಡ್ (2) ಕೆನಡಾ

(3) ಸ್ವಿಟ್ಜರ್‌ಲ್ಯಾಂಡ್ (4) ಬೆಲ್ಜಿಯಂ

**33.** ಹಿಂದೂಗಳ ಪ್ರಸಿದ್ಧ ಯಾತ್ರಾಸ್ಥಳ 'ದ್ವಾರಕಾ' ಇರುವ ರಾಜ್ಯ

(1) ಉತ್ತರ ಪ್ರದೇಶ (2) ಮಧ್ಯ ಪ್ರದೇಶ

(3) ಗುಜರಾತ್ (4) ಮಹಾರಾಷ್ಟ್ರ



www.inyatrust.com

34. ಪ್ರಾಥಮಿಕ ಶಾಲಾ ಮಟ್ಟದಲ್ಲಿ ತರಗತಿಯ ಬೋಧನೆಗೆ ನೇರವಾದ ನಿಹಿತಾರ್ಥಗಳಿರದ ಮನೋವಿಜ್ಞಾನದ ಶಾಖೆಯನ್ನು ಗುರ್ತಿಸಿ

(1) ಸಾಮಾಜಿಕ ಮನೋವಿಜ್ಞಾನ
(2) ಮಿಲಿಟರಿ ಮನೋವಿಜ್ಞಾನ
(3) ವಿಕಾಸ ಮನೋವಿಜ್ಞಾನ
(4) ಅಸಾಮಾನ್ಯ ಮನೋವಿಜ್ಞಾನ

35. ಪ್ರಯೋಗ ವಿಧಾನದಲ್ಲಿ ಪ್ರಯೋಗಕರ್ತನು ಬದಲಾವಣೆಗೆ ಒಳಪಡಿಸುವ ಚರಾಂಶವನ್ನು ________ ಚರಾಂಶ ಎಂದು ಕರೆಯುತ್ತಾರೆ.

(1) ಪರತಂತ್ರ (ಅವಲಂಬಿ)
(2) ಸ್ವತಂತ್ರ
(3) ಮಧ್ಯವರ್ತಿ
(4) ನಿಯಂತ್ರಿತ

36. ಈ ಕೆಳಗಿನವುಗಳಲ್ಲಿ ಯಾವುದು ಗತಿ-ಸಂವೇದನಾತ್ಮಕ ಹಂತದಲ್ಲಿರುವ ಮಕ್ಕಳ ಲಕ್ಷಣವಲ್ಲ ?

(1) ಸಂವೇದನೆಗಳು ಮತ್ತು ಕ್ರಿಯೆಗಳ ಮೂಲಕ ಕಲಿಯುವುದು
(2) ವಸ್ತು ನಿತ್ಯತೆಯ ಪರಿಕಲ್ಪನೆ
(3) ತರ್ಕಬದ್ಧ ಯೋಚನೆ
(4) ಅಹಂಕೇಂದ್ರಿತ ಯೋಚನೆ

37. ಗ್ಯಾಗ್ನೆಯ ಕಲಿಕಾ ಶ್ರೇಣಿಯಲ್ಲಿ ಅತ್ಯಂತ ಕೆಳಮಟ್ಟದ ಕಲಿಕೆಯ ವಿಧ ________

(1) ಶೃಂಖಲಾಕಲಿಕೆ
(2) ಶಾಬ್ದಿಕ ಸಾಹಚರ್ಯ
(3) ಸಂಕೇತ ಕಲಿಕೆ
(4) ಪ್ರಚೋದನ ಅನುಕ್ರಿಯಾ ಕಲಿಕೆ

38. ಸೃಜನಶೀಲ ಮಕ್ಕಳು ತೋರಿಸುವ ಲಕ್ಷಣ

(1) ವಿಚಾರಗಳ ತೀವ್ರಗತಿಯ ಉದ್ಭವ
(2) ಬೇರೆ ಬೇರೆ ದಿಶೆಗಳಲ್ಲಿ ಯೋಚಿಸುವುದು
(3) ಹೊಸ ಹೊಸ ವಿಚಾರಗಳ ಉದ್ಭವ
(4) ಮೇಲಿನ ಎಲ್ಲವೂ



www.inyatrust.com

39. ಈ ಮನೋವಿಜ್ಞಾನಿ ಮನೋವಿಶ್ಲೇಷಣ ಪಂಥದ ಜನಕ ಎಂದು ತಿಳಿಯಲ್ಪಟ್ಟಿದ್ದಾನೆ ---

(1) ಅಡ್ಲೆರ್ (2) ಫ್ರಾಯ್ಡ್

(3) ರೋಜರ್ಸ್ (4) ಮ್ಯಾಸ್ಲೋ

40. ಕ್ರೀಡೆಗಳಲ್ಲಿ ಕೌಶಲಗಳನ್ನು ಬೆಳೆಸಲು ಅತಿಕಡಿಮೆ ಪ್ರಭಾವಕಾರಿಯಾದ ವಿಧಾನ ಯಾವುದು ?

(1) ಕ್ರೀಡಾ ಕೌಶಲಗಳ ಬಗ್ಗೆ ಉಪನ್ಯಾಸಗಳನ್ನು ಕೊಡುವುದು.

(2) ಕ್ರೀಡಾ ಕೌಶಲಗಳ ಬಗ್ಗೆ ಪುಸ್ತಕಗಳನ್ನು ಓದಲು ಸಲಹೆ ನೀಡುವುದು.

(3) ಪ್ರಸಿದ್ಧ ಕ್ರೀಡಾ ಪಟುಗಳಿಂದ ಪ್ರಾತ್ಯಕ್ಷಿಕೆಗಳನ್ನು ಒದಗಿಸುವುದು.

(4) ಸತತವಾಗಿ ಅಭ್ಯಾಸ ಮಾಡಿಸುವುದು.

41. ಮಕ್ಕಳ ಸಮೂಹ ಒಂದರ ಅಭಿರುಚಿ(ಆಸಕ್ತಿ)ಗಳ ವಿನ್ಯಾಸವನ್ನು ಅಧ್ಯಯನ ಮಾಡಲು ಸೂಕ್ತವಾದ ವಿಧಾನ

(1) ಅವಲೋಕನ ವಿಧಾನ (2) ಪ್ರಯೋಗ ವಿಧಾನ

(3) ಸರ್ವೇಕ್ಷಣ ವಿಧಾನ (4) ವ್ಯಕ್ತಿ ಅಧ್ಯಯನ ವಿಧಾನ

42. ಬೆಳವಣಿಗೆ ಮತ್ತು ವಿಕಾಸ ಇವುಗಳ ನಡುವಣ ಸಂಬಂಧದ ಬಗ್ಗೆ ಯಾವ ಹೇಳಿಕೆ ಸರಿಯಾದುದಾಗಿದೆ ?

(1) ಬೆಳವಣಿಗೆ ವಿಕಾಸಕ್ಕಿಂತಲೂ ಹೆಚ್ಚಾದುದು

(2) ವಿಕಾಸ ಬೆಳವಣಿಗೆಯನ್ನು ಒಳಗೊಳ್ಳುತ್ತದೆ

(3) ಬೆಳವಣಿಗೆ ಮತ್ತು ವಿಕಾಸ ಒಂದೇ ಆಗಿವೆ

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

43. ಈ ಕೆಳಗಿನವುಗಳಲ್ಲಿ ಯಾವುದು ಯುವಕರ ಲಕ್ಷಣವಾಗಿಲ್ಲ ?

(1) ಪ್ರತಿ-ಲೈಂಗಿಕ ಆಕರ್ಷಣೆ

(2) ನಾಯಕ ಆರಾಧನೆ

(3) ಪೋಷಕರ ಮೇಲೆ ಅವಲಂಬನೆ

(4) ಸಾಹಸದಲ್ಲಿ ಆಸಕ್ತಿ



www.inyatrust.com

44. ಪ್ರಾಣಿ ತರಬೇತುದಾರನೊಬ್ಬ ಒಂದು ನಾಯಿಗೆ ಸಂಕೀರ್ಣವಾದ ವರ್ತನ ವಿನ್ಯಾಸವನ್ನು ತೋರಿಸುವಂತಹ ತರಬೇತಿ ನೀಡಬೇಕಾಗಿದೆ. ಈ ಕೆಳಗಿನ ಕಲಿಕಾ ವಿಧಗಳಲ್ಲಿ ಅವನು ಯಾವುದನ್ನು ಅನುಸರಿಸುತ್ತಾನೆ ?


(1) ಅಭಿಜಾತ್ಯ ಅನುಬಂಧನ
(2) ಅವಲೋಕನಾತ್ಮಕ ಕಲಿಕೆ
(3) ಒಳನೋಟ ಕಲಿಕೆ
(4) ಕ್ರಿಯಾಪ್ರಸೂತ ಅನುಬಂಧನ

45. ಚಾರಿತ್ರ್ಯ ಎನ್ನುವ ಪದ ಸೂಚಿಸುವುದು


(1) ಎಲ್ಲಾ ವ್ಯಕ್ತಿತ್ವ ಲಕ್ಷಣಗಳು
(2) ನೈತಿಕ ಲಕ್ಷಣಗಳು ಮಾತ್ರ
(3) ದೈಹಿಕ ಲಕ್ಷಣಗಳು ಮಾತ್ರ
(4) ಸಂವೇಗಾತ್ಮಕ ಲಕ್ಷಣಗಳು ಮಾತ್ರ

46. ಕಲಿಕೆಯ ಪ್ರಯತ್ನಗಳ ಸಂಖ್ಯೆ ಮತ್ತು 30 ಅರ್ಥಪೂರ್ಣ ಪದಗಳನ್ನು ಪುನಃಸ್ಮರಣೆ ಮಾಡಿದ ಶೇಕಡಾವಾರು ಪ್ರಮಾಣಕ್ಕೆ ಸಂಬಂಧಿಸಿದ ಅಧ್ಯಯನ ಒಂದರ ಫಲಿತಾಂಶವನ್ನು ಪ್ರತಿನಿಧಿಸುವ ನಕ್ಷೆ ಹೀಗಿರುತ್ತದೆ


(1)





(2)




(3)




(4)






www.inyatrust.com

**47.** ವ್ಯಕ್ತಿಯಿಂದ ಹೊರಗಡೆ ಇರುವ ಮೂಲಗಳಿಂದ ಉಂಟಾಗುವ ಅಭಿಪ್ರೇರಣೆಯನ್ನು ______ ಅಭಿಪ್ರೇರಣೆ ಎಂದು ಕರೆಯುತ್ತಾರೆ

(1) ಆಂತರಿಕ
(2) ಬಾಹ್ಯ
(3) ಭೌತಿಕ
(4) ಮೇಲಿನವು ಯಾವುದೂ ಅಲ್ಲ

**48.** ಈ ಕೆಳಗಿನವುಗಳಲ್ಲಿ ಯಾವುದು ಪ್ರಕ್ಷೇಪಣ ಪರೀಕ್ಷಣವಲ್ಲ ?

(1) ಥೀಮ್ಯಾಟಿಕ್ ಅಪರ್ಸೆಪ್‌ಷನ್ ಪರೀಕ್ಷೆ
(2) ಅಂತರ್ಮುಖತೆ- ಬಹಿರ್ಮುಖತೆ ಪರೀಕ್ಷೆ
(3) ಮಕ್ಕಳ ಅಪರ್ಸೆಪ್‌ಷನ್ ಪರೀಕ್ಷೆ
(4) ರೋರ್ಶಾಕ್ಕನ ಮಸಿ ಕಲೆ ಪರೀಕ್ಷೆ

**49.** ಬುದ್ಧಿ ಶಕ್ತಿ ಸಿದ್ಧಾಂತವನ್ನು ಪ್ರತಿಪಾದಿಸದಿರುವ ಮನೋವಿಜ್ಞಾನಿ ಯಾರು ?

(1) ಆಲ್‌ಪೋರ್ಟ್
(2) ಗಿಲ್‌ಫರ್ಡ್
(3) ಸ್ಪಿಯರ್‌ಮನ್
(4) ಥರ್ಸ್ಟನ್

**50.** ಕೆಳಗಿನವುಗಳಲ್ಲಿ ಆನುವಂಶೀಯತೆಯಿಂದ ನಿರ್ಧಾರವಾಗದ ಲಕ್ಷಣ ಯಾವುದು ?

(1) ಬುದ್ಧಿಶಕ್ತಿ
(2) ಎತ್ತರ
(3) ಮನೋಭಾವ (ಅಭಿವ್ಯಕ್ತಿ)
(4) ಕಣ್ಣಿನ ಬಣ್ಣ

**51.** ಮನೋವಿಜ್ಞಾನದ ಉದ್ದೇಶದ ಅತಿ ಹೆಚ್ಚು ವ್ಯಾಪಕವಾದ ಹೇಳಿಕೆ ಯಾವುದು ?

(1) ಮನೋವಿಜ್ಞಾನ ಮೆದುಳಿನ ಕಾರ್ಯಗಳನ್ನು ಅಧ್ಯಯನ ಮಾಡುವುದರಲ್ಲಿ ಆಸಕ್ತಿ ಹೊಂದಿದೆ
(2) ಮನೋವಿಜ್ಞಾನದ ಗುರಿ ವರ್ತನೆಯನ್ನು ಪೂರ್ವಾನುಮಾನ ಮಾಡುವುದಾಗಿದೆ
(3) ಮನೋವಿಜ್ಞಾನ ಪ್ರಜ್ಞೆಯ ಸ್ವರೂಪವನ್ನು ಅಧ್ಯಯನ ಮಾಡುತ್ತದೆ
(4) ಮನೋವಿಜ್ಞಾನದ ಗುರಿ ವರ್ತನೆಯನ್ನು ವಿಶ್ಲೇಷಿಸಿ ಪೂರ್ವಾನುಮಾನ ಮಾಡಿ ಅದನ್ನು ನಿಯಂತ್ರಿಸುವುದಾಗಿದೆ.

**52.** ನೇರವಾಗಿ (ಪ್ರತ್ಯಕ್ಷವಾಗಿ) ಅವಲೋಕಿಸಲು ಸಾಧ್ಯವಲ್ಲದ ವರ್ತನೆಯನ್ನು ಗುರ್ತಿಸಿ

(1) ಪದ್ಯ ಒಂದನ್ನು ಪಠಣ ಮಾಡುವುದು
(2) ಯಂತ್ರ ಒಂದನ್ನು ಚಾಲನೆ ಮಾಡುವುದು
(3) ದೃಶ್ಯ ಒಂದನ್ನು ಕಲ್ಪಿಸಿಕೊಳ್ಳುವುದು
(4) ಚಿತ್ರ ಒಂದನ್ನು ಗುರ್ತಿಸುವುದು



**www.inyatrust.com**

53. ಈ ಕೆಳಗಿನವುಗಳಲ್ಲಿ ಯಾವುದು ಬುದ್ಧಿಶಕ್ತಿಕೊರತೆಯಿಂದ ಉಂಟಾಗುವುದಿಲ್ಲ ?

(1) ಮೊಂಗೋಲಾಯ್ಡ್ ಸ್ಥಿತಿ (2) ಕ್ರೆಟಿನಿಸಂ ಸ್ಥಿತಿ

(3) ನಿಮ್ನ ಸಾಧನೆಯ ಸ್ಥಿತಿ (4) ಮೈಕ್ರೋಸೆಫಾಲಿಕ್ ಸ್ಥಿತಿ

54. ಸಂಜ್ಞಾನಾತ್ಮಕ ಕಲಿಕಾ ಸಿದ್ಧಾಂತಗಳ ಕೇಂದ್ರ ಪರಿಕಲ್ಪನೆ ಯಾವುದು ?

(1) ಸಬಲೀಕರಣ

(2) ಅನುಬಂಧನ

(3) ನಮೂನೀಕರಣ

(4) ಕಲಿಕಾ ಸನ್ನಿವೇಶವನ್ನು ಸಂರಚಿಸುವಿಕೆ

55. ಲಕ್ಷಣ ಸಮೂಹಗಳ ಆಧಾರದ ಮೇಲೆ ವ್ಯಕ್ತಿತ್ವಗಳನ್ನು ವರ್ಗೀಕರಿಸುವುದರ ಮೂಲಕ ವ್ಯಕ್ತಿತ್ವವನ್ನು ಅಧ್ಯಯನ ಮಾಡುವ ಉಪಕ್ರಮಕ್ಕೆ ----- ಎಂದು ಹೆಸರು.

(1) ವಿಶೇಷಕ ಉಪಕ್ರಮ (2) ಪ್ರರೂಪ ಉಪಕ್ರಮ

(3) ಆಯಾಮ ಉಪಕ್ರಮ (4) ಸಾಮಾಜಿಕ ಉಪಕ್ರಮ

56. ಒಂದು ನೈಜವಾದ ಸಮಸ್ಯಾ ಸನ್ನಿವೇಶದಲ್ಲಿ ವ್ಯಕ್ತಿ ಹೇಗೆ ವರ್ತಿಸುತ್ತಾನೆ ಎಂಬುದನ್ನು ಅಧ್ಯಯನ ಮಾಡಲು ಸೂಕ್ತ-ವಾದುದು ಯಾವುದು ?

(1) ಪ್ರಕ್ಷೇಪಣ ಪರೀಕ್ಷೆ

(2) ವ್ಯಕ್ತಿತ್ವ ಅಂಶಾವಳಿ

(3) ಸನ್ನಿವೇಶ ಪರೀಕ್ಷೆ

(4) ಮೇಲಿನವುಗಳಲ್ಲಿ ಯಾವುದೂ ಅಲ್ಲ

57. ಓರ್ವ ವಿದ್ಯಾರ್ಥಿ ಚೆನ್ನಾಗಿ ಅಧ್ಯಯನ ಮಾಡಿಲ್ಲವಾದ್ದರಿಂದ ಪರೀಕ್ಷೆಯನ್ನು ತೃಪ್ತಿಕರವಾಗಿ ಬರೆದಿಲ್ಲ. ಆ ವಿಧ್ಯಾರ್ಥಿ ತನ್ನ ಪೋಷಕರಿಗೆ ಪ್ರಶ್ನೆ ಪತ್ರಿಕೆ ಬಹಳ ಕ್ಲಿಷ್ಟವಾಗಿತ್ತೆಂದು ಹೇಳುತ್ತಾನೆ ಆದರೆ ವಾಸ್ತವವಾಗಿ ಪ್ರಶ್ನೆಪತ್ರಿಕೆ ವಿದ್ಯಾರ್ಥಿ ಹೇಳುವಂತೆ ತುಂಬಾ ಕಠಿಣವಾಗಿರುವುದಿಲ್ಲ. ಈ ವಿದ್ಯಾರ್ಥಿ ಯಾವ ಪ್ರತಿಪಾದನೆಯ ತಂತ್ರಕ್ಕೆ ಶರಣಾಗಿದ್ದಾನೆ ?

(1) ಪ್ರತಿಗಮನ (2) ಉದಾತ್ತೀಕರಣ

(3) ದಮನ (4) ಸಯುಕ್ತಿಕೀಕರಣ



www.inyatrust.com

**58.** ಈ ಕೆಳಗಿನ ನಿಯಮಗಳಲ್ಲಿ ಯಾವುದು ಕ್ರಿಯಾ ಪ್ರಸೂತ ಅನುಬಂಧನ ಸಿದ್ಧಾಂತದ ನಿಯಮವಾಗಿದೆ ?

(1) ಸಾದೃಶ್ಯತೆಯ ನಿಯಮ
(2) ರೂಪಿಸುವಿಕೆಯ ನಿಯಮ
(3) ಉಪಸಂಹಾರ ನಿಯಮ
(4) ಸಮೀಪತೆಯ ನಿಯಮ

**59.** ಮೊರೇನೋ ರೂಪಿಸಿದ ತಂತ್ರಕ್ಕೆ --------- ಎಂದು ಹೆಸರು.

(1) ವರ್ತನ ಚಿಕಿತ್ಸೆ
(2) ಮನೋಮಿತಿ
(3) ಸಮಾಜಮಿತಿ
(4) ಮನೋನಾಟಕ

**60.** ಫ್ರಾಯ್ಡ್‌ನ ಪ್ರಕಾರ ವ್ಯಕ್ತಿತ್ವದ ಮೂರು ಪದರುಗಳ ವಿಕಾಸದ ಸರಿಯಾದ ಅನುಕ್ರಮ ---------

(1) ಈಗೋ, ಸೂಪರ್ ಈಗೋ, ಇದ್
(2) ಇದ್, ಸೂಪರ್ ಈಗೋ, ಈಗೋ
(3) ಇದ್, ಈಗೋ, ಸೂಪರ್ ಈಗೋ
(4) ಸೂಪರ್ ಈಗೋ, ಇದ್, ಈಗೋ

**61.** ತರಗತಿಯ ಸರ್ವೋಪರಿ ಪರಿಣಾಮಕಾರಿಯಾದ ಸ್ಥಿತಿಯನ್ನು -------- ಎಂದು ಕರೆಯಲಾಗುತ್ತದೆ.

(1) ಸಂಜ್ಞಾನಾತ್ಮಕ – ಸಾಮಾಜಿಕ ವಾತಾವರಣ
(2) ಸಂಜ್ಞಾನಾತ್ಮಕ – ಸಂವೇಗಾತ್ಮಕ ವಾತಾವರಣ
(3) ಸಂವೇಗಾತ್ಮಕ – ನೈತಿಕ ವಾತಾವರಣ
(4) ಸಾಮಾಜಿಕ – ಸಂವೇಗಾತ್ಮಕ ವಾತಾವರಣ

**62.** ವರ್ತನವಾದಿ ಮನೋವಿಜ್ಞಾನಿಗಳ ಗುಂಪಿಗೆ ಸೇರದ ಮನೋವಿಜ್ಞಾನಿ ------

(1) ಥಾರ್ನ್‌ಡೈಕ್
(2) ಸ್ಕಿನ್ನರ್
(3) ಕೋಹ್ಲರ್
(4) ಗುತ್ರಿ



**www.inyatrust.com**

**63.** ಕಲಿಕೆಯನ್ನು ಹೀಗೆ ಪರಿಭಾಷಿಸಲಾಗುತ್ತದೆ ----------

(1) ಪರಿಪಕ್ವನದ ಪರಿಣಾಮವಾಗಿ ಉಂಟಾಗುವ ವರ್ತನೆಯ ಬದಲಾವಣೆ

(2) ಅಭ್ಯಾಸ ಮತ್ತು ಪೂರ್ವಾನುಭವದಿಂದ ಉಂಟಾಗುವ ವರ್ತನೆಯ ಬದಲಾವಣೆ

(3) ವ್ಯಕ್ತಿಯಲ್ಲಿನ ತಾತ್ಕಾಲಿಕ ಪರಿಸ್ಥಿತಿಗಳ ಪರಿಣಾಮವಾಗಿ ಉಂಟಾಗುವ ವರ್ತನೆಯ ಬದಲಾವಣೆ

(4) ಪರಿಪಕ್ವನ ಮತ್ತು ಪೂರ್ವಾನುಭವದ ಪರಿಣಾಮವಾಗಿ ಉಂಟಾಗುವ ವರ್ತನೆಯ ಬದಲಾವಣೆ

**64.** ಮಕ್ಕಳ ನೈತಿಕ ವರ್ತನೆಯ ಮೇಲೆ ಪ್ರಭಾವ ಬೀರದಿರುವ ಅಂಶ -------

(1) ಪೋಷಕರ ತರಬೇತಿ
(2) ಪೋಷಕರ ನಮೂನೀಕರಣದ ಪ್ರಭಾವ
(3) ಅನುವಂಶೀಯತೆ
(4) ವರ್ತನೆಯ ಪರಿಣಾಮ

**65.** ಈ ಕೆಳಗಿನವುಗಳಲ್ಲಿ ಯಾವ ರೀತಿಯ ಯೋಚನೆ 7 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಯೋಚನೆಯ ಲಕ್ಷಣವಾಗಿದೆ ?

(1) ನಿಗಮನ ಯೋಚನೆ
(2) ಅನುಗಮನ ಯೋಚನೆ
(3) ಪೂರ್ವ-ಸಂಕ್ರಿಯಾತ್ಮಕ ಯೋಚನೆ
(4) ಚಿಂತನಪರ ಯೋಚನೆ

**66.** ಸಣ್ಣ ವಯಸ್ಸಿನ ಮಕ್ಕಳು ಸಾಮಾನ್ಯವಾಗಿ ತಮ್ಮ ಪೋಷಕರ ಕೆಲವು ವರ್ತನ ವಿನ್ಯಾಸಗಳನ್ನು ತೋರಿಸುವುದು ಕಂಡು ಬರುತ್ತದೆ. ಈ ರೀತಿಯ ಕಲಿಕೆಯನ್ನು --------- ಎಂದು ಕರೆಯಲಾಗುತ್ತದೆ.

(1) ಅನುಬಂಧನ ಕಲಿಕೆ
(2) ಸಾಹಚರ್ಯಾತ್ಮಕ ಕಲಿಕೆ
(3) ಸಂಜ್ಞಾನಾತ್ಮಕ ಕಲಿಕೆ
(4) ಅವಲೋಕನಾತ್ಮಕ ಕಲಿಕೆ

**67.** ಸ್ಮರಿಸಿಕೊಳ್ಳುವಿಕೆಯ ಹಂತಗಳ ಸರಿಯಾದ ಅನುಕ್ರಮ ಯಾವುದು ?

(1) ಕಲಿಕೆ, ಗುರ್ತಿಸುವಿಕೆ, ಧಾರಣ, ಪುನಃಸ್ಮರಣೆ

(2) ಕಲಿಕೆ, ಪುನಃಸ್ಮರಣೆ, ಧಾರಣ, ಗುರ್ತಿಸುವಿಕೆ

(3) ಕಲಿಕೆ, ಧಾರಣ, ಪುನಃಸ್ಮರಣೆ, ಗುರ್ತಿಸುವಿಕೆ

(4) ಗುರ್ತಿಸುವಿಕೆ, ಧಾರಣ, ಕಲಿಕೆ, ಪುನಃಸ್ಮರಣೆ



www.inyatrust.com

**68.** ಈ ಸಂಖ್ಯಾಶ್ರೇಣಿಯಲ್ಲಿ ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ.

4, 4, 8, 24, 96, ?

(1) 120 (2) 240
(3) 360 (4) 480

**69.** ಯಾವ ಕನಿಷ್ಠ ಸಂಖ್ಯೆಯನ್ನು 10, 15, 20 ಮತ್ತು 25 ರಿಂದ ಭಾಗಿಸಿದಾಗ 7 ಶೇಷ ಉಳಿಯುತ್ತದೆ ?

(1) 127 (2) 247
(3) 297 (4) 307

**70.** A = 3, B = 4, C = 5 ಹೀಗೆ ಮುಂದುವರೆದರೆ MONEY ಎಂಬುದರ ಸಂಕೇತ

(1) 13, 15, 14, 5, 25 (2) 15, 17, 16, 7, 27
(3) 13, 16, 15, 6, 23 (4) 15, 18, 15, 4, 2

**71.** ಗುಂಪಿಗೆ ಸೇರದಿರುವುದನ್ನು ಕಂಡುಹಿಡಿಯಿರಿ.

(1) B F G K (2) P S T X
(3) M P Q U (4) F I J N

**72.** ಒಂದು ಸಂಕೇತದ ಪ್ರಕಾರ 35796 ನ್ನು 44887 ಎಂದು ಬರೆದರೆ ಅದೇ ಸಂಕೇತದ ಪ್ರಕಾರ 46823 ನ್ನು ಹೇಗೆ ಬರೆಯಬಹುದು ?

(1) 57913 (2) 45194
(3) 55934 (4) 55914

**73.** ಕೊಟ್ಟಿರುವ ಅಕ್ಷರ ಶ್ರೇಣಿಯಲ್ಲಿ ಬಿಟ್ಟು ಹೋಗಿರುವುದನ್ನು ಕಂಡುಹಿಡಿಯಿರಿ.

ACZXP, BDYYQ, CEXZR, DFWAS, ?

(1) FGVBT (2) EGUBS
(3) FHVBS (4) EGVBT

---

ಕಚ್ಚಾ ಕಾರ್ಯಕ್ಕಾಗಿ ಜಾಗ




www.inyatrust.com

**74.** ಇಂಗ್ಲೀಷ್ ವರ್ಣಮಾಲೆಯನ್ನು ವಿರುದ್ಧವಾಗಿ ಬರೆದರೆ ನಿಮ್ಮ ಬಲಬದಿಯಿಂದ ಹದಿನಾರನೆ ಅಕ್ಷರದ ಎಡಬದಿಗೆ ಇರುವ ಐದನೆ ಅಕ್ಷರ ಯಾವುದು ?

(1) S (2) V

(3) I (4) K

**75.** ಕೆಳಗಿನ ಪ್ರಶ್ನೆಯಲ್ಲಿ, ಪ್ರಾಧ್ಯಾಪಕರು, ತತ್ವಜ್ಞಾನಿಗಳು ಮತ್ತು ಲೇಖಕರು - ಈ ಮೂವರು ಪರಸ್ಪರ ಸಂಬಂಧವನ್ನು ಹೊಂದಿದ್ದಾರೆ. ಈ ಸಂಬಂಧವನ್ನು ಕೊಟ್ಟಿರುವ ಐದು ಆಕೃತಿಗಳಲ್ಲಿ ಒಂದು ಸರಿಯಾಗಿ ಸೂಚಿಸುತ್ತದೆ. ಅದು ಯಾವುದು ಎಂಬುದನ್ನು ಕಂಡು ಹಿಡಿಯಿರಿ.




1 2 3 4 5

(1) 5 (2) 4

(3) 3 (4) 2

**76.** ಕೊಟ್ಟಿರುವ ಆಕೃತಿಯನ್ನು ಮಡಿಸಿದಾಗ ಘನಾಕೃತಿಯನ್ನು ಉಂಟುಮಾಡುತ್ತದೆ. ಆದರಲ್ಲಿ ಐದು ಚುಕ್ಕೆಗಳುಳ್ಳ ಬದಿಗೆ ಅಭಿಮುಖವಾಗಿರುವ ಚುಕ್ಕೆಗಳೆಷ್ಟು ?



(1) 6 (2) 3


(3) 2 (4) 1

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**77.** ಕೊಟ್ಟಿರುವ ಆಕೃತಿಯಲ್ಲಿ ತ್ರಿಭುಜಗಳು ಎಷ್ಟು ?



(1) 12　　(2) 14

(3) 16　　(4) 20

**78.** Q ನ ಸಹೋದರ P, Q ನ ಮಗಳು R, P ನ ಸಹೋದರಿ T , R ನ ಸಹೋದರ U. ಹಾಗಾದರೆ U ನ ಚಿಕ್ಕಪ್ಪ ಯಾರು ?

(1) P　　(2) Q

(3) T　　(4) R

**79.** ಒಂದು ತರಗತಿಯ ಪರೀಕ್ಷೆಯಲ್ಲಿ ಶೇ. 60 ವಿದ್ಯಾರ್ಥಿಗಳು ತೇರ್ಗಡೆಯಾಗುತ್ತಾರೆ ಮತ್ತು 60 ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಹಾಗಾದರೆ ಆ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

(1) 120　　(2) 130

(3) 140　　(4) 150

**80.** ಇವುಗಳ ಸಾಮ್ಯತೆಯನ್ನು ಪೂರ್ಣಗೊಳಿಸಿ :

G I K M : Q S U W : : S U W Y : ?

(1) ZBDF　　(2) FDBZ

(3) UTRP　　(4) EGIL

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com


**81.** ಕೊಟ್ಟಿರುವ ಅಕ್ಷರಗಳ ಶ್ರೇಣಿಯನ್ನು ಪೂರ್ಣಗೊಳಿಸಿ.

BJ, CL, EN, HP, ?

(1) KR (2) IS

(3) LR (4) MR

**82.** ಕೆಳಗೆ ಕೊಟ್ಟಿರುವ ಆಕೃತಿಯಲ್ಲಿ ಎಷ್ಟು ಸಮಾನಾಂತರ ಚತುರ್ಭುಜಗಳಿವೆ ?



(1) 12 (2) 14

(3) 16 (4) 18

**83.** ಅರ್ಥಪೂರ್ಣ ಗಣಿತ ಸಮೀಕರಣವನ್ನು ಮಾಡಲು, ಕೊಟ್ಟಿರುವ **ಯಾವ ಚಿಹ್ನೆಯ** ಸಮೂಹವನ್ನು (∗) ಈ ಸಂಕೇತಗಳಿರುವ ಜಾಗದಲ್ಲಿ ಅನುಕ್ರಮವಾಗಿ ಆದೇಶಿಸಬೇಕು ?

$14 * 7 * 9 * 112 * 5$

(1) ×, −, =, + (2) ÷, +, =, ×

(3) ÷, =, ÷, + (4) ×, +, =, −

**84.** ಕೆಳಗೆ ಕೊಟ್ಟಿರುವ ಅಕ್ಷರಮಾಲೆಯಲ್ಲಿ Y ದಿಂದ ಮೊದಲು ಮಾಡಿ ಒಂದಾದ ನಂತರ ಒಂದು ಬರುವ ಎಲ್ಲಾ ಅಕ್ಷರಗಳನ್ನು ತೆಗೆದು ಹಾಕಿದರೆ, ಎಡಭಾಗದಿಂದ ಯಾವ ಅಕ್ಷರ ಹತ್ತನೆಯ ಅಕ್ಷರವಾಗಿರುತ್ತದೆ ?

Z Y X W V U T S R Q P O N M L K J I H G F E D C B A

(1) H (2) G

(3) T (4) S

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**85.** ಇಲ್ಲಿ ಎರಡು ಹೇಳಿಕೆಗಳಿವೆ. ಇವುಗಳ ನಂತರ ಎರಡು ತೀರ್ಮಾನಗಳಿವೆ. ಹೇಳಿಕೆಗಳು ನಿಜವಾದುವುಗಳೆಂದು ಭಾವಿಸಿ, ಕೊಟ್ಟ ತೀರ್ಮಾನಗಳಲ್ಲಿ ಯಾವುದು ತಾರ್ಕಿಕವಾಗಿ ಸರಿಯಾದುದು ಎಂಬುದನ್ನು ನಿರ್ಧರಿಸಿ.

ಹೇಳಿಕೆಗಳು : 1. ಕೆಲವು ಪುಸ್ತಕಗಳು ಹಕ್ಕಿಗಳಾಗಿವೆ.

2. ಕೆಲವು ಹಕ್ಕಿಗಳು ಮರಗಳಾಗಿವೆ.

ತೀರ್ಮಾನಗಳು : I. ಕೆಲವು ಮರಗಳು ಪುಸ್ತಕಗಳಾಗಿವೆ.

II. ಕೆಲವು ಮರಗಳು ಹಕ್ಕಿಗಳಾಗಿವೆ.

(1) I ನೇ ತೀರ್ಮಾನವು ಸರಿಯಾದಲ್ಲಿ 1 ಎಂದು ಗುರ್ತಿಸಿ.

(2) II ನೇ ತೀರ್ಮಾನವು ಸರಿಯಾದಲ್ಲಿ 2 ಎಂದು ಗುರ್ತಿಸಿ.

(3) I ಮತ್ತು II ತೀರ್ಮಾನಗಳು ಸರಿಯಾದಲ್ಲಿ 3 ಎಂದು ಗುರ್ತಿಸಿ.

(4) ತೀರ್ಮಾನ I ಅಲ್ಲ ಮತ್ತು II ಅಲ್ಲ ಎಂದಲ್ಲಿ 4 ಎಂದು ಗುರ್ತಿಸಿ.

**86.** ಕೊಟ್ಟಿರುವ ಅಕ್ಷರ ಶ್ರೇಣಿಯನ್ನು ಪೂರ್ಣಗೊಳಿಸಿ :

_ a _ a _ _ b a b _ b _ b a b

(1) ababba (2) aabbaa

(3) bbbaaa (4) bababa

ಕೆಳಗಿನ ಹೇಳಿಕೆಗಳನ್ನು ಅಧ್ಯಯನ ಮಾಡಿ ಪ್ರಶ್ನೆ 87 ಮತ್ತು 88 ನ್ನು ಉತ್ತರಿಸಿ.

1. O, P, Q, R, S ಮತ್ತು T ಎಂಬ ಆರು ಜನರು ಒಂದು ಬೆಂಚಿನ ಮೇಲೆ ಒಬ್ಬರ ಪಕ್ಕದಲ್ಲಿ ಒಬ್ಬರಂತೆ ಕುಳಿತಿದ್ದಾರೆ.
2. Q, R, S ಮತ್ತು T ಕಪ್ಪು ಷೂಗಳನ್ನೂ ಉಳಿದವರು ಬಿಳಿ ಷೂಗಳನ್ನೂ ಧರಿಸಿದ್ದಾರೆ.
3. R ಮತ್ತು T ಯುವಕರು, ಉಳಿದವರು ವೃದ್ಧರು.
4. O, R ಮತ್ತು Q ಕನ್ನಡಕವನ್ನು ಹಾಕಿದ್ದಾರೆ, ಉಳಿದವರು ಹಾಕಿಲ್ಲ.

**87.** ಕನ್ನಡಕವನ್ನು ಹಾಕದ, ಕಪ್ಪು ಷೂ ಧರಿಸಿರುವ ಮನುಷ್ಯನು ಯಾರು ?

(1) T (2) R

(3) S (4) Q

---

ಕಚ್ಚಾ ಕಾರ್ಯಕ್ಕಾಗಿ ಜಾಗ




www.inyatrust.com

**88.** ಕನ್ನಡಕವನ್ನು ಹಾಕದೆ ಇರುವ, ಕಪ್ಪುಷೂ ಧರಿಸಿರುವ ಯುವಕನು ಯಾರು ?

(1) T (2) S
(3) R (4) Q

ಕೆಳಗಿನ ಆಕೃತಿಯಲ್ಲಿ ತ್ರಿಭುಜವು ಗ್ರಾಮಸ್ಥರನ್ನೂ ಚೌಕೋನವು ಅಕ್ಷರಸ್ತರನ್ನೂ ಸಮಾನಾಂತರ ಚತುರ್ಭುಜವು ಆಟಗಾರರನ್ನೂ ಮತ್ತು ವೃತ್ತವು ಕಾರ್ಖಾನೆಯಲ್ಲಿ ಕೆಲಸಮಾಡುವವರನ್ನೂ ಪ್ರತಿನಿಧಿಸುತ್ತವೆ. ಆಕೃತಿಯನ್ನು ಆಧರಿಸಿ ಪ್ರಶ್ನೆ 89 ಮತ್ತು 90 ನ್ನು ಉತ್ತರಿಸಿ.




**89.** ಯಾವ ಸಂಖ್ಯೆಯಿಂದ ಗುರುತಿಸಿರುವ ಜಾಗವು ಹಳ್ಳಿಯಲ್ಲಿರುವ ಅಕ್ಷರಸ್ತ ಆಟಗಾರರು ಹಾಗೂ ಕಾರ್ಖಾನೆಯಲ್ಲಿ ಕೆಲಸಮಾಡುವವರನ್ನು ಪ್ರತಿನಿಧಿಸುತ್ತದೆ ?

(1) 10 (2) 9
(3) 7 (4) 6

**90.** ಹಳ್ಳಿಯಲ್ಲಿ ವಾಸಿಸದ, ಕಾರ್ಖಾನೆಯಲ್ಲಿ ಕೆಲಸಮಾಡುವ ಅಕ್ಷರಸ್ತ ಆಟಗಾರರನ್ನು ಯಾವ ಸಂಖ್ಯೆಯ ಜಾಗ ಪ್ರತಿನಿಧಿಸುತ್ತದೆ ?

(1) 13 (2) 12
(3) 11 (4) 10

**91.** ನನ್ನ ಸ್ನೇಹಿತನು ಸೆಪ್ಟೆಂಬರ್ 3 ರಂದು ಜನಿಸಿದನು. ನಾನು ಅವನಿಗಿಂತ 25 ದಿವಸ ಚಿಕ್ಕವನು. ಆ ವರ್ಷ ಶಿಕ್ಷಕರ ದಿನಾಚರಣೆಯು ಮಂಗಳವಾರವಾದರೆ ನಾನು ಜನಿಸಿದ ದಿನ ಯಾವುದು ?

(1) ಶುಕ್ರವಾರ (2) ಗುರುವಾರ
(3) ಭುಧವಾರ (4) ಶನಿವಾರ

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**92.** ಒಂದು ಸಂಕೇತದ ಪ್ರಕಾರ BEAT ಎಂಬುದನ್ನು DHEY ಎಂದು ಬರೆದರೆ, ಆದೇ ಸಂಕೇತದ ಪ್ರಕಾರ SOUP ಅನ್ನು ಈ ರೀತಿ ಬರೆಯಬಹುದು.

(1) V R Y U (2) U R U Y

(3) U R Y U (4) V R U Y

**93.** ವಿದ್ಯಾರ್ಥಿಗಳ ಒಂದು ಬೀಳ್ಕೊಡುಗೆ ಸಮಾರಂಭದಲ್ಲಿ 100 ವಿದ್ಯಾರ್ಥಿಗಳು ಪ್ರತಿಯೊಬ್ಬರು ಪರಸ್ಪರ ಕೈ ಕುಲುಕುತ್ತಾರೆ. ಹಾಗಾದರೆ, ಆ ಸಮಾರಂಭದಲ್ಲಿ ಎಷ್ಟು ಬಾರಿ ಕೈಗಳು ಕುಲುಕಲ್ಪಟ್ಟವು ?

(1) 9990 (2) 9000

(3) 5050 (4) 4950

**94.** ABCD ಚತುರ್ಭುಜದಲ್ಲಿ AB = 24 ಸೆಂ.ಮೀ. AD = 18 ಸೆಂ.ಮೀ.ಇವುಗಳ ನಡುವಿನ ಕೋನ ಲಂಬ ಕೋನವಾಗಿದೆ. ಇನ್ನುಳಿದ ಎರಡು ಬಾಹುಗಳಲ್ಲಿ ಪ್ರತಿಯೊಂದು ಬಾಹುವು 25 ಸೆಂ.ಮೀ. ಆದರೆ ಆ ಚತುರ್ಭುಜದ ವಿಸ್ತೀರ್ಣವೆಷ್ಟು ?

(1) 486 ಚ. ಸೆಂ.ಮೀ. (2) 516 ಚ. ಸೆಂ.ಮೀ.

(3) 536 ಚ. ಸೆಂ.ಮೀ. (4) 546 ಚ. ಸೆಂ.ಮೀ.

**95.** ಕೆಳಗಿನ ಸಂಖ್ಯಾ ಸರಣಿಯಲ್ಲಿ ತಪ್ಪಿರುವ ಸಂಖ್ಯೆಯನ್ನು ಗುರುತಿಸಿ.

121, 100, 79, 64, 53, 46, 43

(1) 43 (2) 53

(3) 79 (4) 100

**96.** ಯಾವ ಅತ್ಯಂತ ಚಿಕ್ಕ ಸಂಖ್ಯೆಯನ್ನು 6, 5, 4 ರಿಂದ ಭಾಗಿಸಿದಾಗ ಕ್ರಮವಾಗಿ 3, 2, 1 ಶೇಷ ಉಳಿಯುವುದು ?

(1) 27 (2) 47

(3) 57 (4) 63

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com


**97.** ಒಬ್ಬ ವಿದ್ಯಾರ್ಥಿ ತಪ್ಪಾಗಿ ಬಿಡಿಸಿದ ಪ್ರಶ್ನೆಗಳ ಸಂಖ್ಯೆಯು ಸರಿಯಾಗಿ ಬಿಡಿಸಿದ ಪ್ರಶ್ನೆಗಳ ಎರಡರಷ್ಟಿದೆ. 48 ಪ್ರಶ್ನೆಗಳಿಗೆ ಉತ್ತರಿಸಲು ಅವನು ಪ್ರಯತ್ನಿಸಿದರೆ ಎಷ್ಟು ಪ್ರಶ್ನೆಗಳನ್ನು ಸರಿಯಾಗಿ ಬಿಡಿಸಬಹುದು ?

(1) 24 (2) 20
(3) 18 (4) 16

**98.** ಒಂದು ಸಂಕೇತದ ಪ್ರಕಾರ TOUR ಎಂಬುದನ್ನು 1234, CLEAR ಎಂಬುದನ್ನು 56784 ಮತ್ತು SPARE ನ್ನು 90847 ಎಂದು ಬರೆದರೆ, CARE ಎಂಬುದನ್ನು ಹೇಗೆ ಬರೆಯಬಹುದು ?


(1) 3247 (2) 4876
(3) 5247 (4) 5847

**99.** ಕೆಳಗಿನ ಘನಾಕೃತಿಗಳನ್ನು ಗಮನಿಸಿ. ಇವುಗಳ ಆಧಾರದ **ಮೇಲೆ** ಸಂಖ್ಯೆ 4 ಕ್ಕೆ ವಿರುದ್ಧವಾದ ಸಂಖ್ಯೆಯನ್ನು ಕಂಡುಹಿಡಿಯಿರಿ.



(1) 6 (2) 3
(3) 2 (4) 1

**100.** ಈ ಪ್ರಶ್ನೆಯಲ್ಲಿ ಮೂರು ಆಕೃತಿಗಳನ್ನು ಒಂದು ಅನುಕ್ರಮದಲ್ಲಿ ಕೊಡಲಾಗಿದೆ. ಪ್ರಶ್ನೆಗೆ ಉತ್ತರ ರೂಪವಾಗಿ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಮೇಲಿನ ಅನುಕ್ರಮಕ್ಕೆ ಅನುಗುಣವಾಗುವ ನಾಲ್ಕನೆಯ ಆಕೃತಿಯನ್ನು ಕಂಡು ಹಿಡಿಯಿರಿ.



(1) 4 (2) 3
(3) 2 (4) 1

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com